## ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ. ಕೋಲಾರ

2023 –24 ಎಸ್. ಎಸ್. ಎಲ್. ಸಿ 2023 –24 ಮಾದರಿ ಪ್ರಶ್ನೆ ಪತ್ರಿಕೆ– 1

ಸಮಾಜ ವಿಜ್ಞಾನ (85K)

ಸಮಯ : 3 ಗಂಟೆ 15 ನಿಮಿಷ ಗರಿಷ್ಠಅಂಕಗಳು : 80

**I ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅದನ್ನು ಪೂರ್ಣಗೊಳಿಸಲು ಸರಿಯಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ನಿಮ್ಮ ಉತ್ತರ ಪತ್ರಿಕೆಯಲ್ಲಿ ಬರೆಯಿರಿ. 1x8=8**

1. ಪ್ರಾಂತ್ಯಗಳಲ್ಲಿ "ದ್ವಿಸರ್ಕಾರ" ಪದ್ದತಿಗೆ ಅವಕಾಶ ನೀಡಿದ ಕಾಯ್ದೆ
   A) 1909 ರ ಭಾರತೀಯ ಪರಿಷತ್ ಕಾಯ್ದೆ B) 1935 ರ ಭಾರತ ಸರ್ಕಾರ ಕಾಯ್ದೆ
   C) 1919 ರ ಭಾರತ ಸರ್ಕಾರ ಕಾಯ್ದೆ D) 1861 ರ ಭಾರತೀಯ ಪರಿಷತ್ ಕಾಯ್ದೆ
2. ಲಾರ್ಡ್ ವೆಲ್ಲೆಸ್ಲಿಯು ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಜಾರಿಗೆ ತಂದ ನೀತಿ
   A) ಸಹಾಯಕ ಸೈನ್ಯ ಪದ್ಧತಿ B) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ
   C) ಒಡೆದು ಆಳುವ ನೀತಿ D) ಇಲ್ಬರ್ಟ್ ಮಸೂದೆ
3. ' ನಿರ್ಣಾಯಾತ್ಮಕ ಶಸ್ತ್ರ ನಿಯಂತ್ರಣ' (SALT) ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು
   A) ಭಾರತ ಮತ್ತು ರಷ್ಯಾ B) ಚೀನಾ ಮತ್ತು ಭಾರತ
   C) ಬ್ರಿಟನ್ ಮತ್ತು ರಷ್ಯಾ D) ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್‌ರಷ್ಯಾ
4. ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರಿದಿರುವ ಜನರಾಶಿಯೇ
   A) ದೊಂಬಿ B) ಜನ ಮಂದೆ
   C) ಸಮೂಹ ವರ್ತನೆ ಪರಿಸರ ಚಳುವಳಿ D) ಪರಿಸರ ಚಳುವಳಿ
5. ಸಮಾನ ವೇತನ ಕಾಯ್ದೆಯನ್ನು ಜಾರಿಗೆ ತರಲಾದ ವರ್ಷ
   A) 1978 B) 1976
   C) 1986 D) 2006
6. ಭಾರತದ ಹವಳದ ದ್ವೀಪಗಳು
   A) ಲಕ್ಷದ್ವೀಪಗಳು B) ದೇವಘಡ ದ್ವೀಪ
   C) ಅಂಡಮಾನ್ ನಿಕೋಬಾರ್ ದ್ವೀಪಗಳು D) ಸೇಂಟ್ ಮೇರಿಸ್ ದ್ವೀಪ
7. ಹಸಿರು ಕ್ರಾಂತಿಯ ಪಿತಾಮಹ
   A) ಸರ್. ಎಂ. ವಿಶ್ವೇಶ್ವರಯ್ಯ B) ಗಾಂಧೀಜಿ
   C) ಡಾ. ನಾರ್ಮನ್ ಬೋರ್ಲಾಂಗ್ D) ವರ್ಗಿಸ್ ಕುರಿಯನ್
8. ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕ ದೂರುಗಳನ್ನು ಇತ್ಯರ್ಥಪಡಿಸುವ ಆಯೋಗ
   A) ಜಿಲ್ಲಾ ಗ್ರಾಹಕ ವೇದಿಕೆ B) ರಾಜ್ಯ ಆಯೋಗ
   C) ಗ್ರಾಹಕ ಸಂರಕ್ಷಣಾ ಕಾಯ್ದೆ D) ರಾಷ್ಟ್ರೀಯ ಆಯೋಗ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ. 1x8=8**

9. ಬ್ರಿಟಿಷರ ವಿಸ್ತರಣಾ ನೀತಿಗೆ ಪಶ್ಚಿಮ ಮತ್ತು ದಕ್ಷಿಣ ಭಾರತಲ್ಲಿ ಪ್ರಬಲ ವಿರೋಧ ಒಡ್ಡಿದ ಭಾರತಿಯರು ಯಾರು?
10. ನೀಲಿ ನೀರಿನ ನೀತಿಯನ್ನು ಜಾರಿಗೆ ತಂದವರು ಯಾರು?
11. ಕೈಗಾ ವಿರೋಧಿ ಚಳುವಳಿಯ ಪ್ರಮುಖ ಉದ್ದೇಶವೇನು?
12. ಸರ್ವಕಾಲಿಕ ಕಾಲುವೆಗಳೆಂದರೇನು?
13. ಕಪ್ಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?
14. ವಿತ್ತೀಯ ನೀತಿ ಎಂದರೇನು?
15. ವ್ಯಾಪಾರಿಯಾದ ಸುರೇಶನು ರಾಷ್ಟ್ರೀಕೃತ ಬ್ಯಾಂಕ್‌ವೊಂದರಲ್ಲಿ ಖಾತೆ ತೆಗೆಯಲು ತೀರ್ಮಾನಿಸಿದ್ದಾನೆ, ಅವನಿಗೆ ಸೂಕ್ತವಾದ ಬ್ಯಾಂಕ್‌ಖಾತೆಯನ್ನುಸೂಚಿಸಿರಿ.
16. 1948 ಡಿಸೆಂಬರ್ 10 ಮಾನವ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ ಏಕೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ. 2x8=16**

17. ಮಾರ್ತಾಂಡವರ್ಮನು ಡಚ್ಚರನ್ನು ಹೇಗೆ ನಿಯಂತ್ರಿಸಿದನು?
18. ಪಾಂಡಿಚೇರಿಯು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಗೊಂಡಿತು?
19. ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳೇನು?

ಅಥವಾ

ಭಾರತ ಮತ್ತು ರಷ್ಯಾ ನಡುವಿನ ಸಂಬಂದವನ್ನು ವಿವರಿಸಿರಿ.

20. ಅಸ್ಪೃಶ್ಯತಾ ಆಚರಣೆಯನ್ನು ಶಾಸನಾತ್ಮಕವಾಗಿ ನಿಷೇಧಿಸಿದೆ. ಹೇಗೆ?

ಅಥವಾ

ನಿರುದ್ಯೋಗ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹೇಗೆ?

21. ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ. ಹೇಳಿಕೆಯನ್ನು ಸಮರ್ಥಿಸಿರಿ.
22. ರಸ್ತೆ ಸಾರಿಗೆಯ ತೊಡುಕುಗಳೇನು?
23. ಪ್ರಗತಿಪರ ತೆರಿಗೆನೀತಿ ಸಂಕ್ಷಿಪ್ತವಾಗಿ ವಿವರಿಸಿರಿ?
24. ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ದೇಶಗಳೇನು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ. 3X9=27**

25. ಬ್ರಿಟಿಷರ ಕಂದಾಯ ನೀತಿಗಳು ರೈತರ ಶೋಷಣೆಗೆ ಕಾರಣವಾದವು. ಹೇಗೆ?

ಅಥವಾ

ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತದಲ್ಲಿ ಮೈಸೂರು ' ಮಾದರಿ ರಾಜ್ಯ' ಎಂಬ ಕೀರ್ತಿ ಪಡೆಯಿತು. ಹೇಗೆ?

26. ಸಾಮಾಜಿಕ ಸುಧಾರಣೆಗೆ ಬ್ರಹ್ಮ ಸಮಾಜವು ನೀಡಿದ ಕೊಡುಗೆಗಳೇನು?
27. 1857 ರ ದಂಗೆಗೆ ರಾಜಕೀಯ ಹಾಗೂ ಆಡಳಿತಾತ್ಮಕ ಕಾರಣಗಳನ್ನು ವಿವರಿಸಿರಿ?
28. ವಿಶ್ವಸಂಸ್ಥೆಯ ಅನೇಕ ಧ್ಯೆಯೋದ್ಧೇಶಗಳೊಂದಿಗೆ ಕಾರ್ಯ ನಿರ್ವಹಿಸುತ್ತದೆ . ಹೇಗೆ?
29. ವರದಕ್ಷಿಣೆ ಸ್ತ್ರೀಯರ ಸ್ಥಾನಮಾನವನ್ನು ಕುಗ್ಗಿಸುತ್ತದೆ . ಹೇಗೆ?
30. ನಿತ್ಯ ಹರಿದ್ವರ್ಣದ ಕಾಡುಗಳು ಎಲೆಯುದುರಿಸುವ ಮಾನ್ಸೂನ್ ಕಾಡುಗಳಿಗಿಂತ ಹೇಗೆ ಭಿನ್ನವಾಗಿವೆ?

ಅಥವಾ

ಪ್ರವಾಹಗಳು ವಿನಾಶಕಾರಿ ಪ್ರಾಕೃತಿಕ ವಿಕೋಪಗಳಾಗಿವೆ. ಸಮರ್ಥಿಸಿರಿ.

31. ಭಾರತದಲ್ಲಿ ರೂಢಿಯಲ್ಲಿರುವ ಭೂಬಳಕೆಯ ಪ್ರಕಾರಗಳು ಯಾವುವು?

32. ಪಂಚ ವಾರ್ಷಿಕ ಯೋಜನೆಗಳ ಸಾಧನೆಗಳನ್ನು ತಿಳಿಸಿರಿ?

ಅಥವಾ

ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ತಿಳಿಸಿರಿ?

33. ಬ್ಯಾಂಕುಗಳು ಸಲ್ಲಿಸುವ ಸೇವೆಗಳು ಯಾವುವು?

ಅಥವಾ

ಉದ್ಯಮಿಯ ಕಾರ್ಯಗಳು ಯಾವುವು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ.** **4x4=16**

34. ಭಾರತದ ಕೈಗಾರಿಕಾ ವಲಯಗಳನ್ನು ಪಟ್ಟಿ ಮಾಡಿರಿ.

35. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ್ ಚಂದ್ರ ಬೋಸರ ಪಾತ್ರವನ್ನು ವಿವರಿಸಿರಿ?

ಅಥವಾ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಬಂಡಾಯವನ್ನು ವಿವರಿಸಿರಿ.

36. ಕೋಮುವಾದವನ್ನು ನಿಯಂತ್ರಿಸುವುದು ಅನಿವಾರ್ಯವಾಗಿದೆ. ಪುಷ್ಟೀಕರಿಸಿರಿ.

37. ಮೊದಲನೇ ಮಹಾಯುದ್ಧದ ಪರಿಣಾಮಗಳೇನು?

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರಿತಿಸಿರಿ.** **1+4=5**

a) $23^{1}/_{2}{}^{0}$ ಉತ್ತರ ಅಕ್ಷಾಂಶ
b) ಕೋಸಿ ಯೋಜನೆ
c) ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ
d) ನರ್ಮದಾ ನದಿ

**ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ**
**2023–24 ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ – 2**

**ಸಮಯ : 3 ಗಂಟೆ 15 ನಿಮಿಷ** **ಗರಿಷ್ಟ ಅಂಕಗಳು : 80**

## ಸಮಾಜ ವಿಜ್ಞಾನ (85K)

**I ಈ ಕೆಳಗಿನ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.(1 * 8 = 8)**

1) ರಾಜ್ಯ ಪುನರ್ವಿಂಗಡನಾ ಕಾನೂನು ಜಾರಿಗೆ ಬಂದ ವರ್ಷ

A. 1953 B. 1956
C. 1973 D. 1947

2) ಮೊದಲನೆ ಆಂಗ್ಲೋ– ಮರಾಠ ಯುದ್ದವನ್ನು ಅಂತ್ಯವಾಗಿಸಿದ ಒಪ್ಪಂದ.

A. ಅಲಹಾಬಾದ್ ಒಪ್ಪಂದ B. ಸಾಲ್‌ಬಾಯ್ ಒಪ್ಪಂದ
C. ಬೆಸ್ಸಿನ್ ಒಪ್ಪಂದ D. ಸೂರತ್ ಒಪ್ಪಂದ

3) ವಿಶ್ವ ಮಾನವ ಹಕ್ಕುಗಳ ದಿನವನ್ನು ಆಚರಿಸುವುದು

A. ಮಾರ್ಚ್ 15 B. ಆಗಸ್ಟ್ 15
C. ಅಕ್ಟೋಬರ್ 24 D. ಡಿಸೆಂಬರ್ 10

4) ಮೌನ ಕಣಿವೆ ಆಂದೋಲನ ನಡೆದ ಸ್ಥಳ

B. ಕೇರಳದ ಪಾಲ್‌ಘಾಟ್ B. ಗುಜರಾತ್‌ನ ದಂಡಿ
C. ಕರ್ನಾಟಕದ ಉತ್ತರ ಕನ್ನಡ D. ಉತ್ತರ ಪ್ರದೇಶದ ತೆಹ್ರಿ– ಘರ್ವಾಲ್

5) ಸಂವಿಧಾನದ 24ನೇ ವಿಧಿಯು ಮುಖ್ಯವಾಗಿ ಸಂಬಂಧಿಸಿರುವುದು

A. ಮಹಿಳೆಯರ ಸ್ಥಾನಮಾನ B. ನಿರುದ್ಯೋಗ
C. ಬಾಲ ಕಾರ್ಮಿಕ ಪದ್ದತಿ D. ಅಸ್ಪೃಶ್ಯತಾ ಆಚರಣೆ

6) ಕಾಗೆ ಬಂಗಾರ ಎಂದು ಖ್ಯಾತಿ ಹೊಂದಿರುವ ಲೋಹ

A. ಚಿನ್ನ B. ಕಲ್ಲಿದ್ದಲು
C. ಕಬ್ಬಿಣದ ಅದಿರು D. ಅಭ್ರಕ

DDSE, KOLAR

7) ಭಾರತದ ಆರ್ಥಿಕ ಯೋಜನೆಯ ಪಿತಾಮಹ

A. ಮಹಾತ್ಮ ಗಾಂಧೀಜಿ
B. ನೆಹರು
C. ಸರ್.ಎಂ. ವಿಶ್ವೇಶ್ವರಯ್ಯ
D. ಲಾಲ್ ಬಹಾದ್ದೂರ್ ಶಾಸ್ತ್ರಿ

8) ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು

A. ಕೇಂದ್ರ ಹಣಕಾಸು ಸಚಿವರು
B. ಪ್ರಧಾನ ಮಂತ್ರಿ
C. ಕೇಂದ್ರ ಗೃಹ ಸಚಿವರು
D. ಕೇಂದ್ರ ರಕ್ಷಣಾ ಸಚಿವರು

**II ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ ( 1 * 8 = 8)**

9) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾವುವು ?

10) ಮಹಲ್ವಾರಿ ಪದ್ದತಿಯನ್ನು ಜಾರಿಗೆ ತಂದವರು ಯಾರು?

11) SAARC ಯನ್ನು ವಿಸ್ತರಿಸಿ.

12) ಹೆಣ್ಣು ಶಿಶು ಹತ್ಯೆ ಎಂದರೇನು ?

13) ಮಳೆ ನೆರಳಿನ ಪ್ರದೇಶ ಎಂದರೇನು?

14) ಸುವರ್ಣ ಚತುಷ್ಕೋನ ಯೋಜನೆ ಎಂದರೇನು?

15) "ಸುಗ್ಗಿ ನಂತರದ ತಂತ್ರಜ್ಞಾನ" ಅರ್ಥ ತಿಳಿಸಿ.

16) ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವನ್ನು ತಿಳಿಸಿ.

**III ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (2 * 8 = 16)**

17) "ಭಾರತದ ರೈತರು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಬದುಕಿ ಸಾಲದಲ್ಲೇ ಸತ್ತರು" ಈ ಹೇಳಿಕೆಯನ್ನು ಸಮರ್ಥಿಸಿರಿ.

18) ಅಸ್ಪೃಶ್ಯತೆಯ ನಿವಾರಣೆಗೆ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ತಿಳಿಸಿ ?

**ಅಥವಾ**

ದೊಂಬಿಗೆ ಕಾರಣಗಳನ್ನು ತಿಳಿಸಿ.

19) "ನಾಝಿ ಸಿದ್ದಾಂತವು ಜರ್ಮನಿಯನ್ನು ಹಾಳು ಮಾಡಿತು" ಹೇಗೆ ?

DDSE, KOLAR

20) **"ಕೋಮುವಾದವು ದೇಶದ ಐಕ್ಯತೆಗೆ ಮಾರಕ"** ಸಮರ್ಥಿಸಿ.

**ಅಥವಾ**

ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ನಿಮ್ಮ ಸಲಹೆಗಳೇನು?

21) ನೀರಾವರಿಯ ವಿಧಗಳಾವುವು?

22) ಭೂಕಂಪದ ನಿಯಂತ್ರಣಕ್ಕೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಟ್ಟಿ ಮಾಡಿರಿ.

23) ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಯ ವ್ಯತ್ಯಾಸವೇನು?

24) ವಿಶ್ವ ಗ್ರಾಹಕರ ಆಂದೋಲನ ಚರಿತ್ರೆಯಲ್ಲಿ ಮಾರ್ಚ್ 15, 1962 ಒಂದು ಮಹತ್ವ ದಿನವಾಗಿದೆ. ಹೇಗೆ?

**IV ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಐದು – ಆರು ವಾಕ್ಯಗಳಲ್ಲಿ ಉತ್ತರಿಸಿ. (3 * 9 = 27)**

25) ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿ.

26) ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳು ಯಾವುವು ?

27) ಸ್ವಾಮಿ ವಿವೇಕಾನಂದರು ಹೇಗೆ ಯುವ ಶಕ್ತಿಯ ಪ್ರೇರಕರಾಗಿದ್ದರು ಎಂಬುದನ್ನು ವಿವರಿಸಿ.

**ಅಥವಾ**

ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವನ್ನು ವಿವರಿಸಿ.

28) ವಿಶ್ವಸಂಸ್ಥೆಯ ಉದ್ದೇಶಗಳನ್ನು ತಿಳಿಸಿ.

29) ಮಣ್ಣಿನ ಸಂರಕ್ಷಣೆಗೆ ಕೈಗೊಂಡ ಕ್ರಮಗಳನ್ನು ವಿವರಿಸಿರಿ.

**ಅಥವಾ**

ಅರಣ್ಯ ಸಂರಕ್ಷಣೆ ಎಂದರೇನು? ಅರಣ್ಯ ಸಂರಕ್ಷಣೆಗೆ ನಿಮ್ಮ ಸಲಹೆಗಳು ಯಾವುವು ?

30) ಭಾರತದ ಕೈಗಾರಿಕ ವಲಯಗಳನ್ನು ಪಟ್ಟಿಮಾಡಿರಿ.

31) ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸವೇನು?

32) ಗಾಂದೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರಿಕರಣದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

ವಿತ್ತೀಯ ಕೊರತೆ ಎಂದರೇನು? ಅದರ ನಾಲ್ಕು ವಿಧಗಳನ್ನು ಗುರುತಿಸಿರಿ.

33) ಬ್ಯಾಂಕಿನ ಗುಣಲಕ್ಷಣಗಳನ್ನು ತಿಳಿಸಿ

**ಅಥವಾ**

ಉದ್ಯಮಶೀಲತೆಯ ಗುಣಲಕ್ಷಣಗಳನ್ನು ತಿಳಿಸಿ.

DDPI, KOLAR

**V ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ. (4 * 4 = 16)**

34) 1857 ರ ದಂಗೆಯ ವಿಫಲತೆಗೆ ಕಾರಣಗಳನ್ನು ವಿವರಿಸಿ.

35) ಬ್ರಿಟಿಷ್ ಶಿಕ್ಷಣವು ಭಾರತೀಯರ ಮೇಲೆ ಬೀರಿದ ಪರಿಣಾಮಗಳಾವುವು ?

**ಅಥವಾ**

ನೆಹರು ಪ್ರಧಾನಿಗಳಾದ ನಂತರ ರಾಷ್ಟ್ರಕ್ಕೆ ನೀಡಿದ ಕೊಡುಗೆಗಳೇನು?

36) ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು ?

37) ವ್ಯವಸಾಯ ಎಂದರೇನು? ವ್ಯವಸಾಯದ ವಿಧಗಳ ಯಾವುವು?

**VI** 38) **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನ ಸ್ಥಳಗಳನ್ನು ಗುರುತಿಸಿ. ( 1 + 4 = 5)**

A. ಮಲಬಾರ್ ತೀರ

B. ಪಂಪಸಾಗರ

C. $82.5^0$ ಪೂರ್ವ ರೇಖಾಂಶ

D. ಭಾರತದ ಹೆಬ್ಬಾಗಿಲು

DDSE, KOLAR

ಉಪ-ನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ .ಕೋಲಾರ

ಎಸ್. ಎಸ್. ಎಲ್. ಸಿ. **2023-24** ಮಾದರಿ ಪ್ರಶ್ನೆ ಪತ್ರಿಕೆ **-3**

ಸಮಾಜ ವಿಜ್ಞಾನ **(85K)**

ಸಮಯ: **3** ಗಂಟೆ **15** ನಿಮಿಷ ಗರಿಷ್ಠ ಅಂಕಗಳು **: 80**

**I.** ಈ ಪ್ರತಿಯೊಂದು ಪ್ರಶ್ನೆಹೇಳಿಕೆಗೆಅಥವಾಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ: **8 x 1 = 8**

1. ಮೊದಲ ಕರ್ನಾಟಿಕ್ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ
   (A) ಪಾಂಡಿಚೆರಿ ಒಪ್ಪಂದ
   (B) ಮದ್ರಾಸ್ ಒಪ್ಪಂದ
   (C) ಪ್ಯಾರಿಸ್ ಒಪ್ಪಂದ
   (D) ಎಕ್ಸ್-ಲಾ ಚಾಪಲ್ ಒಪ್ಪಂದ
2. 'ಬ್ರಿಟಿಷ್ ಭೂಕಂದಾಯ ನೀತಿಯಿಂದ ಭಾರತದ ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು.' ಹೀಗೆಂದವರು
   (A) ಲಾರ್ಡ್ ಕಾರ್ನ್ ವಾಲೀಸ್
   (B) ಮೆಕಾಲೆ
   (C) ಜೇಮ್ಸ್ ಥಾಮಸ್
   (D) ಅಲೆಕ್ಸಾಂಡರ್ ರೀಡ್
3. ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದೇ ಉದ್ದೇಶದಿಂದ ಸ್ಥಾಪನೆಗೊಂಡ ವಿಶ್ವಸಂಸ್ಥೆಯ ಸಂಘ–ಸಂಸ್ಥೆ ,
   (A) ವಿಶ್ವ ಆರೋಗ್ಯ ಸಂಸ್ಥೆ
   (B) ಯುನೆಸ್ಕೋ
   (C) ಯೂನಿಸೆಫ್
   (D) ಅಂತರಾಷ್ಟ್ರೀಯ ಕಾರ್ಮಿಕರ ಸಂಸ್ಥೆ

4. ಬಾಲ್ಯವಿವಾಹ ನಿರ್ಮೂಲನ ಕಾಯ್ದೆ ಜಾರಿಗೆ ಬಂದ ವರ್ಷ

   (A) 1961

   (B) 1987

   (C) 2006

   (D) 1994

DDPI KOLAR

5. ಸೆಟ್ಲೇಜ್ ನದಿಗೆನಿರ್ಮಾಣವಾಗಿರುವ ಏಷ್ಯಾದಲ್ಲಿಯ ಅತ್ಯಂತ ಎತ್ತರವಾದ ಅಣೆಕಟ್ಟು

(A)ಕೃಷ್ಣ ಅಣೆಕಟ್ಟು
(B) ಭಾಕ್ರಾ ಅಣೆಕಟ್ಟು
(C )ಹಿರಾಕುಡ್ ಅಣೆಕಟ್ಟು
( D) ತುಂಗಭದ್ರಾ ಅಣೆಕಟ್ಟು

6. ಪ್ರಸ್ತುತ ದಿನಗಳಲ್ಲಿ ಭಾರತದಿಂದ ಪೆಟ್ರೋಲಿಯಂ ಕಚ್ಚಾ ತೈಲ ಆಮದು ಹೆಚ್ಚಾಗುತ್ತಿದೆ. ಏಕೆಂದರೆ,

(A) ರಫ್ತು ಸುಂಕ ಕಡಿಮೆಯಾಗಿದೆ
(B) ಉತ್ಪಾದನಾ ವೆಚ್ಚ ಅಧಿಕವಾಗಿದೆ
(C) ಭಾರತದಲ್ಲಿ ಉತ್ಪಾದನೆ ಕಡಿಮೆ
(D) ಪೆಟ್ರೋಲಿಯನ್ ನಿಕ್ಷೇಪ ಕಡಿಮೆಯಾಗಿದೆ

7. 1993ರ 73ನೇ ಸಂವಿಧಾನದ ತಿದ್ದುಪಡಿಯ ಉದ್ದೇಶ

(A) ಸಮಾನ ವೇತನ ಕಾಯ್ದೆ ಜಾರಿಗೆ
(B) ಸ್ವರ್ಣ ಗ್ರಾಮೋದಯ ಯೋಜನೆ ಜಾರಿಗೆ
(C) ಮಹಿಳಾ ಸ್ವಸಹಾಯ ಸಂಘ ಸ್ಥಾಪನೆ
(D) ದೇಶಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆ ಅಸ್ತಿತ್ವ

8. ರವಿ ಎಂಬುವರು ಭವಿಷ್ಯದಲ್ಲಿ ಕಾರುಕೊಳ್ಳಲು ಇಂದಿನ ಹಣ ಉಳಿತಾಯ ಮಾಡಲು ಸೂಕ್ತವಾದ ಬ್ಯಾಂಕ್ ಖಾತೆ

(A) ಆವರ್ತ ಠೇವಣಿ
(B)ಉಳಿತಾಯ ಖಾತೆ
(C) ಚಾಲ್ತಿ ಖಾತೆ
(D)ನಿಶ್ಚಿತ ಠೇವಣಿ ಖಾತೆ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 8 x 1 = 8**

9. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಜಾರಿಗೆ ತಂದವರು ಯಾರು?
10. ಶ್ರೀ ನಾರಾಯಣ ಗುರುರವರು ಪ್ರಾರಂಭಿಸಿದ ಸಂಘಟನೆ ಯಾವುದು ?
11.ಭ್ರಷ್ಟಾಚಾರನಿಯಂತ್ರಣಕ್ಕೆ ಸ್ಥಾಪನೆ ಆಗಿರುವ ಸಂಸ್ಥೆಗಳಗಳಾವುವು?
12.ಸಾಮಾಜಿಕ ಸ್ತರವಿನ್ಯಾಸ ಎಂದರೇನು ?
13.ಅಸಂಘಟಿತ ಕೆಲಸಗಾರರಿಗೆ ಒಂದು ಉದಾಹರಣೆ ಕೊಡಿ .

DDSE, KOLAR

14. ಶಿವಾಲಿಕ್ ಶ್ರೇಣಿಯನ್ನು 'ಪಾದ ಬೆಟ್ಟಗಳು' ಎಂದು ಏಕೆ ಕರೆಯುತ್ತಾರೆ?

15. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮುಖ್ಯ ಉದ್ದೇಶವೇನು ?

16. ರೋಹಿಣಿ 1,00,000 ರೂಪಾಯಿಯ ಹೊಸ ಕಂಪ್ಯೂಟರ್ ಕೊಳ್ಳುತ್ತಾಳೆ. ಆದರೆ ಅದು ಒಂದು ತಿಂಗಳಲ್ಲಿ ಕೆಟ್ಟು ಹೋಗುತ್ತದೆ.ಆಕೆಯ ಅಹವಾಲನ್ನು ಕಂಪ್ಯೂಟರ್ ಕಂಪನಿಯವರು ಮನ್ನಿಸಲಿಲ್ಲ.ರೋಹಿಣಿ ಯಾವ ಗ್ರಾಹಕರ ವೇದಿಕೆಗೆ ದೂರು ಸಲ್ಲಿಸಬೇಕು?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ** **8 x 2 = 16**

17. ಕರ್ನಾಟಕ ರಾಜ್ಯದಲ್ಲಿ ಬಡತನ ನಿವಾರಣೆಗಾಗಿರೂಪಿಸಿರುವಯೋಜನೆಗಳನ್ನು ವಿವರಿಸಿ.

**ಅಥವಾ**

ಭಾರತದಲ್ಲಿ ಬಾಲ್ಯವಿವಾಹ ನಿಷೇಧ ಅತ್ಯಂತ ಅವಶ್ಯಕವಾಗಿದೆ. ಏಕೆ ?

18. ಭಯೋತ್ಪಾದನಾ ನಿಗ್ರಹಕ್ಕೆ ಭಾರತ ಕೈಗೊಂಡಿರುವ ಕ್ರಮಗಳು ಯಾವುವು?

**ಅಥವಾ**

ಪ್ರಪಂಚದಾದ್ಯಂತ ಶಿಕ್ಷಣ ಮತ್ತು ಜ್ಞಾನಪ್ರಸರಿಸುವಲ್ಲಿಯುನೆಸ್ಕೋ ಪಾತ್ರ ಮಹತ್ವದಾಗಿದೆ?

19. ಜ್ಯೋತಿಬಾಪುಲೆ ಅವರು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯರಾಗಿದ್ದಾರೆ. ಏಕೆ?

20. ಭಾರತದ ಋತುಮಾನಗಳನ್ನು ಹೆಸರಿಸಿ

21. ಗೋಧಿ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳನ್ನು ವಿವರಿಸಿ

22. ಸಾರ್ವಜನಿಕ ಹಣಕಾಸು ವೈಯಕ್ತಿಕ ಹಣಕಾಸಿಗಿಂತ ಭಿನ್ನವಾಗಿದೆ ಎಂಬುದನ್ನು ಸಮರ್ಥಿಸಿ.

23. ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ದೇಶಗಳನ್ನು ವಿವರಿಸಿ.

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.** **9 x 3 =27**

25. ಪ್ಲಾಸಿ ಕದನಪರಿಣಾಮಗಳನ್ನು ವಿವರಿಸಿ.

**ಅಥವಾ**

ಎರಡನೇ ಮಹಾಯುದ್ಧಕ್ಕೆ ಕಾರಣಗಳಾವುವು ವಿವರಿಸಿ.

DDSE, KOLAR

26.ಭಾರತದ ರಾಷ್ಟ್ರೀಯ ಉದ್ಯಾನಗಳನ್ನು ಪಟ್ಟಿ ಮಾಡಿ.

**ಅಥವಾ**

ಉನ್ನತ ತಂತ್ರಜ್ಞಾನ ಬಳಕೆಯಾಗುತ್ತಿರುವ ಇಲಾಖೆಗಳನ್ನು ಪಟ್ಟಿ ಮಾಡಿ.

27.ಪಂಚವಾರ್ಷಿಕ ಯೋಜನೆಗಳು ಉದ್ದೇಶಗಳನ್ನು ವಿವರಿಸಿ.

**ಅಥವಾ**

ಮಹಿಳೆಯರ ಸ್ವಾಭಿಮಾನವನ್ನು ಹೆಚ್ಚಿಸುವಲ್ಲಿ ಸ್ತ್ರೀಶಕ್ತಿ ಸಂಘಗಳ ಪಾತ್ರ ವಿವರಿಸಿ.

28.ಬ್ಯಾಂಕುಗಳ ಗುಣಲಕ್ಷಣವನ್ನು ವಿವರಿಸಿ.

**ಅಥವಾ**

ಉದ್ಯಮಿಯ ಕಾರ್ಯಗಳನ್ನು ವಿವರಿಸಿ.

29.ಚಿಕ್ಕ ದೇವರಾಜ ಒಡೆಯರ ಸಾಧನೆಗಳನ್ನು ವಿವರಿಸಿ.

30.ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು.

31.ಭಾರತ–ಪಾಕಿಸ್ತಾನ ಮದ್ಯೆ ಉದ್ವೇಗ್ನ ಕಾರಣವಾದ ಅಂಶಗಳು ಯಾವುವು?

32. ಪಶ್ಚಿಮ ಘಟ್ಟಗಳುಮತ್ತು ಪೂರ್ವಘಟ್ಟಗಳಿಗಿರುವ ವ್ಯತ್ಯಾಸವನ್ನು ಪಟ್ಟಿ ಮಾಡಿ.

33.ದುಡಿಮೆಯ ತಾರತಮ್ಯವನ್ನು ಸ್ವರೂಪವನ್ನು ವಿವರಿಸಿ.

**V.** ಈ ಪ್ರತಿಯೊಂದು ಪ್ರಶ್ನೆಗೂ **8** ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. **4 x 4 =16**

34. 'ಸ್ವತಂತ್ರ ಹೋರಾಟದಲ್ಲಿ ಕ್ರಾಂತಿಕಾರಿಗಳ ಪೂರ್ಣ ಸ್ವತಂತ್ರದ ಕನಸು ಕಂಡಿದ್ದರು' ದೃಢೀಕರಿಸಿ.

**ಅಥವಾ**

1833 ರಚಾರ್ಟರ್ ಕಾಯ್ದೆ ಭಾರತದ ಒಟ್ಟು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸುವ ಉದ್ದೇಶವಾಗಿದೆ.ಸಮರ್ಥಿಸಿ.

35. 1857ದಂಗೆಯ ಪರಿಣಾಮಗಳನ್ನು ವಿವರಿಸಿ.

36. ಸಾಕ್ಷರತೆ ವೃದ್ಧಿಸಲುಸರ್ಕಾರಕೈಗೊಂಡಿರುವ ಕ್ರಮಗಳಾವುವು?

37. ಪ್ರವಾಹಗಳಿಂದ ಉಂಟಾಗುವ ಪರಿಣಾಮಗಳು ಮತ್ತು ಪ್ರವಾಹ ನಿಯಂತ್ರಣ ಕ್ರಮಗಳನ್ನು ವಿವರಿಸಿ.

**VI. 38.** ಭಾರತದ ನಕ್ಷೆಯನ್ನು ಬರೆದು**,** ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ **: 1 + 4 = 5**

a) ನಾಗಾರ್ಜುನ ಸಾಗರ

b) ಕಲ್ಪಕಂ

c) 23½ $^{0}$ಉತ್ತರ ಅಕ್ಷಾಂಶ

d) ಲಕ್ಷ ದ್ವೀಪ

DDSE, KOLAR

**ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ**

**2023–24 ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ – 4**

**ಸಮಯ : 3 ಗಂಟೆ 15 ನಿಮಿಷ** **ಗರಿಷ್ಟ ಅಂಕಗಳು : 80**

**ಸಮಾಜ ವಿಜ್ಞಾನ (85ಐ)**

**I ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ**

**1*8=8**

1 ಪೋರ್ಚುಗೀಸರು ಭಾರತದಲ್ಲಿ ರಾಜಕೀಯವಾಗಿ ಕಳೆಗುಂದಲು ಕಾರಣವೇನು ?

ಎ) ಇಂಗ್ಲೀಷರ ದಾಳಿ ಬಿ) ಡಚ್‌ರ ಮತ್ತು ಇಂಗ್ಲೀಷರ ಆಗಮನ

ಸಿ) ಅಲ್ಬುಕರ್ಕನ ನಂತರ ಬಂದ ಅಧಿಕಾರಿಗಳು ದುರ್ಬಲರಾಗಿದ್ದರು ಡಿ) ವ್ಯಾಪಾರದಲ್ಲಿ ನಷ್ಟ ಅನುಭವಿಸಿದರು

2 'ಅಖಿಲ ಕರ್ನಾಟಕರಾಜ್ಯ ನಿರ್ಮಾಣ ಪರಿಷತ್' ಚಳುವಳಿಯ ಮುಖ್ಯ ಉದ್ದೇಶ

ಎ) ಮೈಸೂರ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವುದು ಬಿ) ಕರ್ನಾಟಕ ರಾಜ್ಯದ ರಚನೆ

ಸಿ) ಕನ್ನಡ ಮಾತನಾಡುವ ಪ್ರದೇಶಗಳನ್ನು ಒಂದುಗೂಡಿಸುವುದು

ಡಿ) ಕರ್ನಾಟಕವನ್ನು ಭಾರತದ ಒಕ್ಕೂಟಕ್ಕೆ ಸೇರಿಸುವುದು

3 ಮಹಿಳೆಯರ ಮತ್ತು ಮಕ್ಕಳ ಅಭಿವೃದ್ದಿಗೆ ಪೂರಕವಾದ ಪರಿಸರವನ್ನು ಒದಗಿಸುವ ವಿಶ್ವಸಂಸ್ಥೆಯ ಆಶ್ರಯ ಸಂಸ್ಥೆ

ಎ) ಯುನಿಸೆಫ್ ಬಿ) ಯುನೆಸ್ಕೋ ಸಿ) ಐ ಎಮ್‌ಎಫ್ ಡಿ) ಐ ಎನ್ ಒ

4 'ಕೂಲಿಯಿಂದ ಶಾಲೆಗೆ' ಕಾರ್ಯಕ್ರಮದ ಉದ್ದೇಶ

ಎ) ಮಕ್ಕಳನ್ನು ಕೂಲಿಯಿಂದ ಬಿಡಿಸುವುದು ಬಿ) ಮಕ್ಕಳಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು

ಸಿ) ಬಾಲ ಕಾರ್ಮಿಕ ಪದ್ದತಿ ನಿಷೇಧಿಸುವುದು ಡಿ) ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆದು ದಾಖಲಿಸುವುದು

5 ಸಮಾನ ವೇತನ ಕಾಯದೆ ಜಾರಿಗೆ ಬಂದ ವರ್ಷ

ಎ) 1976 ಬಿ) 1986 ಸಿ) 1876 ಡಿ) 1886

6 ಬಾಕ್ಸೈಟ್‌ನ್ನು'ಅದ್ಬುತ ಲೋಹ'ಎಂದು ಕರೆಯಲು ಕಾರಣ

ಎ) ಇದು ಸುಂದರವಾಗಿದೆ ಬಿ) ಇದನ್ನು ವೈವಿದ್ಯಮಯ ಉಪಯೋಗಕ್ಕೆ ಬಳಸುವುದರಿಂದ

ಸಿ) ಇದು ಅತಿ ಹಗುರ ಮತ್ತು ಕಾಠಿಣ್ಯತೆ ಹೊಂದಿದೆ ಡಿ) ಇದು ಎಲ್ಲಾ ಕಡೆ ದೊರೆಯುವುದರಿಂದ

DDSE, KOLAR

7 ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯ ಮುಖ್ಯ ಉದ್ದೇಶ

ಎ) ಕೃಷಿ ಅಭಿಬೃದ್ದಿ          ಬಿ) ಎಲ್ಲರನ್ನು ಒಳಗೊಂಡ ಬೆಳವಣಿಗೆ

ಸಿ) ಕೈಗಾರಿಕೆಅಭಿವೃದ್ದಿ          ಡಿ) ಮಾಹಿತಿ ತಂತ್ರಜ್ಞಾನ ಅಭಿವೃದ್ದಿ

8 ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ಮತ್ತು ಸಮಗ್ರತೆ ಕೇಂದ್ರಿಕರಿಸಲು 1978 ರಲ್ಲಿ ಸ್ಥಾಪಿತವಾದ ಸಂಸ್ಥೆ

ಎ) ಸಣ್ಣ ಕೈಗಾರಿಕಾ ಅಭಿವೃದ್ದಿ ಸಂಸ್ಥೆ   ಬಿ) ತಾಂತ್ರಿಕ ಸಲಹಾ ಸಂಸ್ಥೆ

ಸಿ) ಜಿಲ್ಲಾಕೈಗಾರಿಕಾ ಕೇಂದ್ರ          ಡಿ) ರಾಷ್ಟ್ರೀಯ ಕೈಗಾರಿಕಾ ನಿಗಮ

**11. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ                    1*8=8**

9. 'ಸೈಮನ್ ಆಯೋಗ ಭಾರತೀಯರಿಗೆ ಮಾಡಿದ ಅವಮಾನವೆಂದು ರಾಷ್ಟ್ರೀಯ ಕಾಂಗ್ರೆಸ್ ಭಾವಿಸಿ ಸೈಮನ್ ಆಯೋಗವನ್ನು ಬಹಿಸ್ಕರಿಸಿತು' ಈ ಹೇಳಿಕೆ ಸಮರ್ಥಿಸಿ ?

10. ಸ್ವಾಮಿ ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದುರಿಗಿ'ಎನ್ನುವ ಘೋಷಣೆಯ ಉದ್ದೇಶವೇನು ?

11. ದೊಂಬಿ ಎಂದರೇನು ?

12. ಜಾಗತಿಕ ಸಂಸತ್ತು ಎಂದು ಕರೆಯಲಾಗುವ ವಿಶ್ವ ಸಂಸ್ಥೆಯ ಅಂಗ ಸಂಸ್ಥೆ ಯಾವುದು ?

13. ಬೇಸಿಗೆ ಕಾಲದಲ್ಲಿ ಉತ್ತರ ಭಾರತವು ಅತಿ ಹೆಚ್ಚು ಉಷ್ಣಾಂಶ ಹೊಂದಲು ಕಾರಣವೇನು ?

14. ಮಿಶ್ರ ಬೇಸಾಯವನ್ನು ವಾಖ್ಯಾನಿಸಿ.

15. ಸುವರ್ಣ ಗ್ರಾಮೋದಯ ಯೋಜನೆಯ ಮುಖ್ಯ ಉದ್ದೇಶವೇನು ?

16. ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಬ್ಯಾಂಕ್ಖಾತೆ ಯಾವುದು ?

**III ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .          2*8=16**

17. ಮೂರನೇ ಕರ್ನಾಟಿಕ್ ಯುದ್ದದ ಪರಿಣಾಮಗಳೇನು ?

18. ರಾಜ್ಯ ಪುನರ್ ವಿಂಗಡಣಾ ಆಯೋಗ ರಚನೆಯಾದ ವರ್ಷ ಯಾವುದು ಹಾಗೂ ಅದರ ಸದಸ್ಯರು ಯಾರು ?

19. ಜಗತ್ತಿನಲ್ಲಿ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಠಿ ತಂದುಕೊಟ್ಟ ಘಟನೆಗಳು ಯಾವವು ?

ಅಥವಾ

ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.

DDSE, KOLAR

20 ನಿರುದ್ಯೋಗ ಸಮಸ್ಯೆ ಸಮಾಜದಲ್ಲಿ ಹಲವಾರು ಸಮಸ್ಯೆ ಸೃಷ್ಟಿಸುತ್ತದೆ ಸಮರ್ಥಿಸಿ.

ಅಥವಾ

ಬಾಲ್ಯ ವಿವಾಹವು ಮಕ್ಕಳ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತದೆ ಹೇಗೆ ಸಮರ್ಥಿಸಿ.

21. ವಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸಿನ ವ್ಯತ್ಯಾಸಗಳೇನು ?

22. ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಹಕ್ಕುಗಳನ್ನು ಹೆಸರಿಸಿ.

23. ಬಬೂಲ್, ಸಿಲ್ವರ್, ಲಾರೆಲ್, ಶಿಷಮ್, ಬೈರಾ, ಸಭಾಯ್ ಹುಲ್ಲು ಇವುಗಳನ್ನು ಹುಲ್ಲುಗಾವಲು ಸಸ್ಯವರ್ಗ ಮತ್ತು ಹಿಮಾಲಯದ ಅಲ್ಪೈನ್ ಸಸ್ಯವರ್ಗಗಳಾಗಿ ವಿಂಗಡಿಸಿ.

24 ಮಣ್ಣಿನ ಸವೆತವು ಪ್ರಾಕೃತಿಕವಾಗಿ ಅನೇಕ ಪರಿಣಾಮಗಳನ್ನು ಉಂಟುಮಾಡುತ್ತದೆ ವಿಶ್ಲೇಸಿರಿ.

**IV ಈ ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ 3*9=27**

25. 1935 ರ ಭಾರತ ಸರ್ಕಾರದ ಕಾಯ್ದೆಯು ,ಭಾರತ ಸಂವಿಧಾನದ ಬುನಾದಿ, ಎಂದು ಸಮರ್ಥಿಸಿ.

26. ಸಾಮಾಜಿಕ ಸುಧಾರಣೆಯಲ್ಲಿ ಸತ್ಯಶೋಧಕ ಸಮಾಜದ ಪಾತ್ರವೇನು ?

ಅಥವಾ

1857 ರದಂಗೆಯು ಬ್ರಿಟಿಷರನ್ನು ಭಾರತದಿಂದ ಹೊರಹಾಕುವಲ್ಲಿ ವಿಫಲವಾಯಿತು ಹೇಗೆ ?

27 ಮುಸಲೋನಿಯ ಫ್ಯಾಸಿಸ್ಟವಾದವು ಅತ್ಯಂತ ಕ್ರೂರವಾಗಿತ್ತು ವಿವರಿಸಿ.

28. ಭಾರತ ಮತ್ತು ಅಮೇರಿಕಾ ದೇಶಗಳು ಎರಡು ಪ್ರಜಾಪ್ರಭುತ್ವ ದೇಶಗಳಾಗಿದ್ದು ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ.

29 ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವವು ?

30 ಭಾರತದಲ್ಲಿರುವ ಪೂರ್ವ ಮತ್ತು ಪಶ್ಚಿಮ ಬಂದರಗಳನ್ನು ಪಟ್ಟಿ ಮಾಡಿ.

ಅಥವಾ

ಭತ್ತ ಮತ್ತು ಗೋಧಿ ಬೆಳೆಯಲು ಬೇಕಾದ ಭೌಗೋಳಿಕ ಅಂಶಗಳನ್ನು ವಿವರಿಸಿ.

31. ಪ್ರವಾಹಕ್ಕೆ ಒಳಪಡುವ ಪ್ರದೇಶಗಳನ್ನು ಪಟ್ಟಿಮಾಡಿ ?

32. ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ ಹೇಗೆ ?

ಅಥವಾ

ಕೇಂದ್ರ ಸರ್ಕಾರದ ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚಗಳನ್ನು ವಿವರಿಸಿ.

DDPI, KOLAR

33. ಅಂಚೆ ಕಛೇರಿಯು ಗ್ರಾಹಕರಿಗೆ ನೀಡುವ ವಿವಿಧ ಸೇವೆಗಳನ್ನು ತಿಳಿಸಿ ?

ಅಥವಾ

ಕೇಂದ್ರ ಮತ್ತುರಾಜ್ಯ ಸರಕಾರಗಳು ಉದ್ದಿಮೆಗಳಿಗೆ ಹಣಕಾಸು, ಮಾರುಕಟ್ಟೆ, ತರಭೇತಿ ನೀಡಲು ಸ್ಥಾಪಿಸಿದ ಸಂಸ್ಥೆಗಳು ಯಾವವು ?

**V ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ** **4*4=16**

34. ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಲ್ಲಿ ಪುಟ್ಟಬಸಪ್ಪನ ದಂಗೆಯನ್ನು ವಿವರಿಸಿ

35. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತಿವ್ರಗಾಮಿಗಳ ಪಾತ್ರವನ್ನು ವಿವರಿಸಿ.

ಅಥವಾ

ಬ್ರಿಟಿಷರ ವಿರುದ್ದ ರಾಣಿಗಾಡಿಯನ್ ಲೂ ಹೋರಾಡಿದ ಬಗೆಯನ್ನು ವಿವರಿಸಿ

36. ಸಾಕ್ಷರತೆಯನ್ನು ವೃದ್ದಿಸಲು ಸರ್ಕಾರವು ನಿರಂತರವಾಗಿ ಶ್ರಮಿಸುತ್ತಿದೆ ಹೇಗೆ ಸಮರ್ಥಿಸಿ.

37. ದೂರ ಸಂವೇದಿ ತಂತ್ರಜ್ಞಾನ ಬಳಕೆಯಿಂದ ಆದ ಬದಲಾವಣೆಗಳೇನು ?

**VI 38. ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ** **1+4=5**

**ಎ) ಕೊಂಕಣತೀರ**

**ಬಿ) ಪಂಪಾ ಸಾಗರ**

**ಸಿ) ಕೋಸಿ**

**ಡಿ) ತಾರಾಪುರ**

DDSE, KOLAR

## ಉಪನಿರ್ದೇಶಕರ ಕಛೇರಿ. ಶಾಲಾ ಶಿಕ್ಷಣ ಇಲಾಖೆ. ಕೋಲಾರ ಜಿಲ್ಲೆ. ಕೋಲಾರ.

**2023–2024** **ವಿಷಯ : ಸಮಾಜ ವಿಜ್ಞಾನ**

**ಸಮಯ : 3ಗಂಟೆ 15 ನಿಮಿಷ** **ಮಾದರಿ ಪ್ರಶ್ನೆಪತ್ರಿಕೆ – 5** **ಗರಿಷ್ಟ ಅಂಕಗಳು: 80**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8 ×1=8**

**1. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದವರು**

A) ಲಾರ್ಡ್ ವೆಲ್ಲೆಸ್ಲಿ B) ಲಾರ್ಡ್ ಕಾರ್ನವಾಲೀಸ್ C) ಲಾರ್ಡ್ ಡಾಲ್‌ಹೌಸಿ D) ವಾರನ್ ಹೇಸ್ಟಿಂಗ್ಸ್

**2. ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ವಿರೋಧಿಸಲು ಕಾರಣ**

A) ರಾಯಲ್ ಎನ್‌ಫೀಲ್ಡ್ ಬಂದೂಕುಗಳು ಬಂದೂಕುಗಳು ಅತ್ಯಂತ ಭಾರವಾಗಿದ್ದವು.

B) ಬಂದೂಕುಗಳ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು.

C) ಬಂದೂಕುಗಳನ್ನು ಉಪಯೋಗಿಸುವ ಸಾಮರ್ಥ್ಯ ಸೈನಿಕರಲ್ಲಿರಲಿಲ್ಲ.

D) ಬ್ರಿಟಿಷರು ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದರು.

**3. ಅಂತರರಾಷ್ಟ್ರೀಯ ನ್ಯಾಯಾಲಯವಿರುವ ಸ್ಥಳ**

A) ನ್ಯೂಯಾರ್ಕ್ B) ಜೀನೇವಾ C) ಪ್ಯಾರೀಸ್ D) ದಿ ಹೇಗ್

**4. 1976ರ ಸಮಾನ ವೇತನ ಕಾಯ್ದೆಯನ್ನು ಜಾರಿಗೆ ತರಲು ಕಾರಣ**

A) ಶ್ರಮ ವಿಭಜನೆಗೆ ಹೆಚ್ಚು ಒತ್ತು ನೀಡಲು B) ಕೆಲಸಗಾರರ ವಿಶೇಷ ಪರಿಣಿತಿಯನ್ನು ಉತ್ತೇಜಿಸಲು

C) ದುಡಿಮೆಯಲ್ಲಿನ ತಾರತಮ್ಯ ನಿವಾರಿಸಲು D) ಕೂಲಿ ಹಂಚಿಕೆಯಲ್ಲಿ ಸಮಾನತೆಯನ್ನು ತರಲು

**5. ಮಕ್ಕಳ ಸಹಾಯವಾಣಿ ಸಂಖ್ಯೆ**

A) 1098 B) 1089 C) 1908 D) 1980

**6. ಗಂಗಾನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿದೆ. ಏಕೆಂದರೆ**

A) ಭಾರತದ ಶೇ. 40ರಷ್ಟು ಜನರು ಅಲ್ಲಿ ವಾಸಿಸುತ್ತಾರೆ.

B) ಅತಿ ಹೆಚ್ಚು ಜನರು ಸಕ್ಕರೆಯನ್ನು ಉಪಯೋಗಿಸುತ್ತಾರೆ.

C) ವರ್ಷಪೂರ್ತಿ ನೀರಾವರಿ ಸೌಲಭ್ಯವನ್ನು ಹೊಂದಿದೆ.

D) ಹೆಚ್ಚಿನ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯಲಾಗುತ್ತದೆ.

**7. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸದಸ್ಯರುಗಳೆಂದರೆ**

A) ರಾಜ್ಯ ಸರ್ಕಾರಗಳ ಕಾರ್ಯದರ್ಶಿಗಳು B) ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು

C) ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಮಂತ್ರಿಗಳು D) ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲ

DDPI KOLAR

**8.** ಪರಿಹಾರ ಮೊತ್ತವು **20** ಲಕ್ಷ ರೂಪಾಯಿಗಳನ್ನು ಮೀರಿದ್ದು ಒಂದು ಕೋಟಿಯೊಳಗಿದ್ದರೆ ದೂರು ನೀಡಬೇಕಾದ ಗ್ರಾಹಕ ವೇದಿಕೆ

A) ತಾಲ್ಲೂಕು ವೇದಿಕೆ B) ಜಿಲ್ಲಾ ವೇದಿಕೆ C) ರಾಜ್ಯ ಆಯೋಗ D) ರಾಷ್ಟ್ರೀಯ ಆಯೋಗ

**II.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **8X1=8**

**9.** ಎರಡನೇಯ ಆಂಗ್ಲೋ-ಮರಾಠ ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?

**10. 1909**ರ ಮಿಂಟೋ-ಮಾರ್ಲೆ ಸುಧಾರಣೆಗಳು ದೇಶದ ವಿಭಜನೆಗೆ ಹೇಗೆ ಕಾರಣವಾದವು?

**11.** ದತ್ತಿ ಸಮಿತಿಯ ಕಾರ್ಯಕ್ಷೇತ್ರವು ಇಂದು ಕಡಿಮೆಯಾಗುತ್ತಿದೆ. ಏಕೆ?

**12.** ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

**13.** ಬೇಸಿಗೆ ಕಾಲದಲ್ಲಿ ಉತ್ತರ ಭಾರತದ ಉಷ್ಣಾಂಶ ಹೆಚ್ಚಾಗಿರಲು ಕಾರಣವೇನು?

**14.** ದಾಮೋದರ ನದಿಯನ್ನು ಪಶ್ಚಿಮ ಬಂಗಾಳದ 'ಕಣ್ಣೀರಿನ ನದಿ' ಎಂದು ಏಕೆ ಕರೆಯುತ್ತಾರೆ?

**15.** ಡಾ.ಎಂ.ಎಸ್.ಸ್ವಾಮಿನಾಥನ್‌ರವರನ್ನು 'ಭಾರತದ ಹಸಿರು ಕ್ರಾಂತಿಯ ಪಿತಾಮಹ' ಎಂದು ಕರೆಯುತ್ತಾರೆ. ಏಕೆ?

**16.** ಉದ್ಯಮಶೀಲತೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಹೇಗೆ?

**III.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ : **8 X 2=16**

**17.** ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು. ಹೇಗೆ?

**18.** ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತದ ದೇಶೀಯ ಸಂಸ್ಥಾನಗಳನ್ನು ವಿಲಿನಗೊಳಿಸಿ ಯಶಸ್ವಿಯಾದದ್ದು ಹೇಗೆ?

**19.** ನಿಶ್ಯಸ್ತ್ರೀಕರಣವು ಪ್ರಚಲಿತ ಜಗತ್ತಿನ ಅವಶ್ಯಕತೆಯಾಗಿದೆ. ಏಕೆ?

ಅಥವಾ

ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳನ್ನು ಪಟ್ಟಿ ಮಾಡಿರಿ.?

**20.** ನಿರುದ್ಯೋಗವು ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ಹೇಗೆ?

ಅಥವಾ

ಬಾಲಕಾರ್ಮಿಕತೆಯ ನಿರ್ಮೂಲನ ಕ್ರಮಗಳನ್ನು ವಿವರಿಸಿ.?

**21.** ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ ಏಕೆ?

**22.** ರಸ್ತೆ ಸಾರಿಗೆಯಲ್ಲಿ ಕಂಡುಬರುವ ತೊಡಕುಗಳನ್ನು ವಿವರಿಸಿ?

**23.** ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಗಳ ನಡುವಿನ ವ್ಯತ್ಯಾಸಗಳೇನು?

**24.** ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳನ್ನು ತಿಳಿಸಿ.?

**IV.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : **9 X 3=27**

**25.** ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ. ?

ಅಥವಾ

DDPI KOLAR

ಮುಸ್ಲಿಂ ಸಮಾಜ ಸುಧಾರಣೆಯಲ್ಲಿ ಸರ್ ಸಯ್ಯದ್ ಅಹಮ್ಮದ್ ಖಾನ್‌ರವರ ಪಾತ್ರ ಮಹತ್ತರವಾದುದು. ಸಮರ್ಥಿಸಿ.?

**26.** 1857ರ ದಂಗೆಗೆ ಕಾರಣವಾದ ಆಡಳಿತಾತ್ಮಕ ಮತ್ತು ಸೈನಿಕ ಕಾರಣಗಳನ್ನು ವಿವರಿಸಿ.?

**27.** ನೆಹರೂರವರು ಪ್ರಧಾನಮಂತ್ರಿಯಾಗಿ ಭಾರತದ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳನ್ನು ವಿವರಿಸಿ.?

**28.** ಭಾರತ ಮತ್ತು ರಷ್ಯಾ ದೇಶಗಳು ಉತ್ತಮ ಬಾಂಧವ್ಯವನ್ನು ಹೊಂದಿವೆ. ಸಮರ್ಥಿಸಿ.?

**29.** ಮಹಿಳಾ ಸ್ವಸಹಾಯ ಸಮೂಹಗಳ ಮಹತ್ವವನ್ನು ವಿವರಿಸಿ.?

**30.** ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಹೇಗೆ?

ಅಥವಾ

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳಾವುವು? ವಿವರಿಸಿ.

**31.** ಭಾರತದ ಭೂಬಳಕೆಯ ಪ್ರಕಾರಗಳಾವುವು?

**32.** ಗಾಂಧೀಜಿಯವರ ಗ್ರಾಮರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ವಿವರಿಸಿ.?

ಅಥವಾ

ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಡುವಿನ ವ್ಯತ್ಯಾಸಗಳನ್ನು ತಿಳಿಸಿ.?

**33.** ಬ್ಯಾಂಕಿನ ಗುಣಲಕ್ಷಣಗಳನ್ನು ಪಟ್ಟಿ ಮಾಡಿರಿ.?

ಅಥವಾ

ಉದ್ಯಮಿಯ ಕಾರ್ಯಗಳನ್ನು ಪಟ್ಟಿ ಮಾಡಿ.?

**V.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ : **4 X 4=16**

**34.** ಕಿತ್ತೂರಿನ ಬಂಡಾಯದಲ್ಲಿ ವೀರರಾಣಿ ಚೆನ್ನಮ್ಮಳ ಪಾತ್ರವನ್ನು ವಿವರಿಸಿ.?

**35.** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವನ್ನು ವಿವರಿಸಿ?

ಅಥವಾ

ಎರಡನೇ ಮಹಾಯುದ್ಧದ ಪರಿಣಾಮಗಳೇನು?

**36.** ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?

**37.** ಭೂ ಕುಸಿತಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ವಿವರಿಸಿ.?

**VI. 38.** ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : **1+4 = 5**

**a)** ಇಂದಿರಾಕೋಲ್.

**b)** ಭಾರತದ ಚಹದ ಬಂದರು.

**c)** ಗೋವಿಂದ ಸಾಗರ.

**d)** ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ.

DDSE KOLAR